ಧಾರವಾಡ ಜಿಲ್ಲೆಯ ಬುಡನಾಳ ರಕ್ಷಿತ ಅರಣ್ಯ ಪ್ರದೇಶದಲ್ಲಿ ಮೃಗಾಲಯ ಸ್ಥಾಪನೆ

578(5022)) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆ ಬುಡನಾಳ ರಕ್ಷಿತ ಅರಣ್ಯ ಪ್ರದೇಶದಲ್ಲಿ ರಾಷ್ಟ್ರಮಟ್ಟದ ಮೃಗಾಲಯ ಸ್ಥಾಪಿಸುವ ಯೋಜನೆ ವಿಳಂಬವಾಗುತ್ತಿರುವುದು ನಿಜವೇ;

ಆ) ಸದರಿ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಸದರಿ ಯೋಜನೆಗೆ ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸಲಾಗಿದೆಯೆ; ಸಲ್ಲಿಸಿದ್ದಲ್ಲಿ, ಪ್ರಸ್ತಾವನೆಯ ವಿವರ ಹಾಗೂ ದಿನಾಂಕ ತಿಳಿಸುವುದು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಧಾರವಾಡ ಜಿಲ್ಲೆ ಬುಡನಾಳ ರಕ್ಷಿತ ಅರಣ್ಯ ಪ್ರದೇಶದಲ್ಲಿ ರಾಷ್ಟ್ರಮಟ್ಟದ ಮೃಗಾಲಯ ಸ್ಥಾಪಿಸುವ ಯೋಜನೆಯು ಪರಿಶೀಲನೆಯ ಹಂತದಲ್ಲಿದೆ.

ಆ) ರೂ. 10.25 ಕೋಟಿ.

ಇ) ಕೇಂದ್ರ ಮೃಗಾಲಯ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಪ್ರಸ್ತಾವನೆ ಪರಿಶೀಲನೆಯ ನಂತರ ಸಲ್ಲಿಸಲಾಗುವುದು.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಡಲಾಗಿದೆ, ಆದರೆ ಹಿಂದೆ ಎರಡು ವರ್ಷಗಳ ಹಿಂದೆ ನಾನು ಇದೇ ಪ್ರಶ್ನೆಯನ್ನು ಕೇಳಿದ್ದೆ ಆಗ ಏನು ಉತ್ತರವನ್ನು ಕೊಟ್ಟಿದ್ದಾರೋ ಅದೇ ಉತ್ತರವನ್ನು ಈಗಲೂ ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೇಳುವುದೇನೆಂದರೆ, ಸದರಿ ಪ್ರಸ್ತಾವನೆಗೆ ಯಾವಾಗ ಕೇಂದ್ರ ಸರ್ಕಾರದಿಂದ ಪರಿಶೀಲನೆ ಪಡೆಯಬಹುದು? ಮತ್ತು ಸದರಿ ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ ಯಾವುದು? ಅದರ ವಿವರ ಕೇಳಿದ್ದೆ, ನನಗೆ ಉತ್ತರ ಸಿಗಲಿಲ್ಲ. ಆದ್ದರಿಂದ ತಮ್ಮ ಮುಖಾಂತರ ವಿವರಗಳನ್ನು ಕೇಳಬಯಸುತ್ತೇನೆ. ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಇಷ್ಟೇ ನಮ್ಮ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕಾಗಲಿ ಅಥವಾ ಸುತ್ತಮುತ್ತ ಯಾವುದೇ ಒಂದು ಆಕರ್ಷಿತವಾದ ಸ್ಥಳವಿಲ್ಲ, ಮಕ್ಕಳಿಗಾಗಲಿ, ಹಿರಿಯರಿಗಾಗಲಿ, ಯಾರಿಗೂ ಇಲ್ಲ. ಆದ್ದರಿಂದ, ಈ ಪ್ರಸ್ತಾವನೆಯನ್ನು ಬೇಗನೆ ಪರಿಶೀಲಿಸಿ ನಮ್ಮ ಭಾಗಕ್ಕೆ ಆಕರ್ಷಣೀಯವಾದ ಸ್ಥಳ ಮಾಡಿ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಈ ಪ್ರಕ್ರಿಯೆ ಇದೆ. ನಾನು ಈಗಾಗಲೇ ಉತ್ತರದಲ್ಲಿ ತಿಳಿಸಿರುವಂತೆ 10.25 ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ಕಳುಹಿಸಲಾಗಿದೆ. ಅದು ಪರಿಶೀಲನೆಯಲ್ಲಿದೆ, ಅದು ಪರಿಶೀಲನೆಯಾದ ತಕ್ಷಣ ಜಾಗ್ರತೆ ಕಳುಹಿಸಿಕೊಡುತ್ತೇನೆ.

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ಎರಡೂ ವರ್ಷಗಳ ಹಿಂದೆಯೂ ಇಷ್ಟೇ ಹಣ ಇದ್ದು, ಈಗಲೂ ಇಷ್ಟೇ ಮೌಲ್ಯದ ಪ್ರಾಜೆಕ್ಟ್ ಕಳುಹಿಸಿದ್ದೇವೆಂದು ಹೇಳುತ್ತೀರಿ, ಎರಡೂವರೆ ವರ್ಷಗಳಿಂದ ಎರಡೂ ಉತ್ತರಗಳು ಸೇಮ್ ಇವೆ. ದಿನಾಂಕ 5-3-2001ಕ್ಕೂ ಅದೇ ಉತ್ತರ, ಈಗಲೂ ಅದೇ ಉತ್ತರ ಇದೆ, ಅಂದರೆ ಈ ಪರಿಶೀಲನೆ ಏನು ಇದೆ ಇದು ಕೇವಲ ಪರಿಶೀಲನೆಯಲ್ಲಿ ಮಾತ್ರ ಇದೆಯೋ ಅಥವಾ ಇದನ್ನು ಮಾಡುವ ಇಚ್ಛೆ ಸರ್ಕಾರಕ್ಕಿದೆಯೋ ಅಥವಾ ಇಲ್ಲವೋ ಎಂಬುದನ್ನು ನನಗೆ ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಕೇಂದ್ರ ಸರ್ಕಾರದ ಅಭಿಪ್ರಾಯ, ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಎಂಟು ಮೃಗಾಲಯಗಳು ಇರುವುದರಿಂದ, ಇನ್ನು ಹೆಚ್ಚು ಕೊಡಬಾರದು ಎನ್ನತಕ್ಕಂಥ ಒಂದು ನಿಲುವು ಇದೆ. ಆದ್ದರಿಂದ, ನಾವು ಮತ್ತೆ ಇದನ್ನು ಪರಿಶೀಲಿಸಿ, ಪುನಃ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ಅದಕೋಸ್ಕರ ಪುನಃ ಕಳುಹಿಸಿಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಎರಡೂವರೆ ವರ್ಷಗಳ ಹಿಂದೆ 10.25 ಕೋಟಿ ರೂಗೆ ಕಳುಹಿಸಿರತಕ್ಕಂಥ ಪ್ರಸ್ತಾವನೆ, ಈಗಲೂ ಅಷ್ಟೇ ಇದೆ....

ಶ್ರೀ ಕೆ.ಹೆಚ್. ರಂಗನಾಥ್ : ಅದೇ ಆಗಿಲ್ಲ ಎಂದೆ ಪುನಃ ಇಲ್ಲಿ ಚಾಸ್ತಿ ಮಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ನಾನು ತಮಗೆ ಹೇಳುವಂಥದ್ದು ಏನೆಂದರೆ, ಮಾನ್ಯ ರಂಗನಾಥ್‌ರವರೆ, ತಾವು ಮತ್ತೊಮ್ಮೆ ಪುನರ್ ಪರಿಶೀಲನೆಗೆ ಕಳುಹಿಸಿದರೆ ಆ ಎಸ್ಟಿಮೇಟ್ ಎಲ್ಲಾ ಚೇಂಜ್ ಆಗಬೇಕಲ್ಲವೆ? ಎರಡು ವರ್ಷಗಳ ಹಿಂದೆ ಅಷ್ಟೇ ಕಾಸ್ಟ್ ಇವತ್ತು ಅಷ್ಟೇ ಕಾಸ್ಟ್ ಇರುತ್ತದೆಯೇ? ಹೊಸದಾಗಿ ಪ್ರಸ್ತಾವನೆ ಏನೆಂದು ಕಳುಹಿಸಿದ್ದಾರೆಂಬುದನ್ನು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರ ಅಭಿಪ್ರಾಯ ಸಾಧುವಾಗಿದೆ. ಆದರೆ ಅದೇ ಪ್ರಾರಂಭವಾಗಲಿಲ್ಲ, ಒಂದು ಗಾದೆ ಇದೆ, "ಊರಲ್ಲಿ ಇರಬೇಡ ಅಂದರೆ ಬಳದು ಮನೆ ಕೊಡು ಎಂದನಂತೆ ಯಾರೋ" ಹಾಗಾಗಿದೆ ಲೆಕ್ಕಾಚಾರ.

ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ನಮ್ಮ ಭಾಗಕ್ಕೆ ಇದೇ ಅನ್ವಯಿಸುತ್ತದೇನ್ರಿ? ಅಧ್ಯಕ್ಷರೇ, ನಮ್ಮಲ್ಲಿ ಒಂದೂ ಆಕರ್ಷಿತ ಸ್ಥಳವಿಲ್ಲ, ಇದು ಎರಡನೇ ಮಹಾ ನಗರವಾಗಿದೆ, ಮಕ್ಕಳ ಸಲುವಾಗಿ ಮೃಗಾಲಯ ಮಾಡಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಬರೇ ಪರಿಶೀಲನೆ ಎಂದರೆ ಏನು ಮಾಡುವುದು?

ಅಧ್ಯಕ್ಷರು : ಸರ್ಕಾರಕ್ಕೆ ಎಷ್ಟೋ ಕಷ್ಟಗಳು ಇರುತ್ತವೆ ಅದಕ್ಕೆ ಏನು ಮಾಡುವುದಕ್ಕಾಗುತ್ತದೆ? ನೆಕ್ಸ್ಟ್ ಎ.ಬಿ. ಪಾಟೀಲ್‌ರವರದ್ದು, 15 ದಿವಸ ಟೈಂ ಕೇಳಿದ್ದಾರೆ, ನೀಲಕಂಠಪ್ಪನವರದ್ದು, ಅವರದ್ದು ವರ್ಗಾಯಿಸಲಾಗಿದೆ, ಅವರು ಇಲ್ಲ, ನೆಕ್ಸ್ಟ್ ಅಶೋಕ್ ತಾವು ಪ್ರಶ್ನೆ ಕೇಳಿ.

ಬೆಂಗಳೂರು ಉತ್ತರ ತಾಲ್ಲೂಕು ದಾಸರಹಳ್ಳಿ ನಗರಸಭೆ ವ್ಯಾಪ್ತಿಯ ಸರ್ಕಾರಿ ರಸ್ತೆಯ ಒತ್ತುವರಿ

581(4979) ಶ್ರೀ ಅಶೋಕ್ ಆರ್. (ಉತ್ತರ ಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ದಾಸರಹಳ್ಳಿ ನಗರಸಭೆ ವ್ಯಾಪ್ತಿಯ ಸ.ನಂ. 40,41,42 ಮತ್ತು 45:2 ರಲ್ಲಿರುವ 0.26 ಗುಂಟೆ ಸರ್ಕಾರಿ ರಸ್ತೆಯನ್ನು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಲೇಔಟ್ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿರುವ ಭೂಗಳ್ಳರ ಸಂಪೂರ್ಣ ಮಾಹಿತಿ ನೀಡುವುದು;

ಇ) ಈ ರಸ್ತೆಯನ್ನು ಸರ್ಕಾರ ಭೂಗಳ್ಳರಿಂದ ವಶಪಡಿಸಿಕೊಳ್ಳಲು ಯಾವ ಕ್ರಮ ಕೈಗೊಂಡಿದೆ;

ಈ) ಇನ್ನು ಎಷ್ಟು ದಿನದಲ್ಲಿ ಸದರಿ ಜಾಗವನ್ನು ಸರ್ಕಾರ ವಶಪಡಿಸಿಕೊಳ್ಳಲಿದೆ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಸರ್ವೆ ನಂ.45ರ ಜಮೀನಿನ ಮಾಲೀಕರುಗಳು ಒತ್ತುವರಿ ಮಾಡಿಕೊಂಡಿರುತ್ತಾರೆ.